# ಉಪಕಾರ



■ ನರಸಿಂಹಾರೆಡ್ಡಿ ಯಂಕಮೊಳ
ಕಲೆ: ಸಂತೋಷ್ ಸಸಿಹಿತ್ಲು

ಕುಂತಲ ದೇಶದ ಮಹಾರಾಜ ಚಂದ್ರಸೇನರಿಗೆ ತಮ್ಮ ಆಡಳಿತದ ಬಗ್ಗೆ ಪ್ರಜೆಗಳ ಅಭಿಪ್ರಾಯವೇನು ಎಂದು ತಿಳಿಯುವ ಮನಸ್ಸಾಯಿತು. ಆಸ್ಥಾನದ ಚಿತ್ರಕಲಾವಿದನಾದ ಬ್ರಹ್ಮದತ್ತನನ್ನು ಜೊತೆಗೆ ಕರೆದುಕೊಂಡು ಮಾರುವೇಷದಲ್ಲಿ ಒಂದು ಗ್ರಾಮಕ್ಕೆ ಹೋದರು. ಅಷ್ಟರಲ್ಲಿ ಸಂಜೆಯಾಗಿತ್ತು. ದೂರದ ಪ್ರಯಾಣದಿಂದ ಇಬ್ಬರಿಗೂ ಹಸಿವಾಗಿತ್ತು. ತಿನ್ನಲು ಏನಾದರೂ ಸಿಕ್ಕರೆ ಸರಿಯಾಗಿತ್ತು ಅನಿಸಿತು. ಒಂದು ಮನೆಯ ಅಂಗಳಕ್ಕೆ ಬಂದು ಯಾರಿದ್ದೀರಿ ಕುಡಿಯಲು ಸ್ವಲ್ಪ ನೀರು ಕೊಡಿ ಎಂದು ಕೂಗಿದ ಬ್ರಹ್ಮದತ್ತ. ಒಳಗಡೆಯಿಂದ ಬಂದ ಆಸಾಮಿ ಏನೂ ಮಾತನಾಡದೆ ಇವರನ್ನು ದುರುಗುಟ್ಟಿ ನೋಡಿ ಬಾಗಿಲು ಮುಚ್ಚಿಕೊಂಡ. ಮಹಾರಾಜರಿಗೆ ಆಶ್ಚರ್ಯವಾಯಿತು. ಅವನು ಯಾಕೆ ಹೀಗೆ ಮಾಡಿದ? ನನ್ನ ರಾಜ್ಯದಲ್ಲಿ ನೀರು ಊಟಕ್ಕೆ ಕೊರತೆಯಿಲ್ಲ. ಏನೋ ಸಮಸ್ಯೆಯಿರಬಹುದು ಅದಕ್ಕೆ ಹಾಗೆ ಮಾಡಿರಬಹುದೆಂದು ಮತ್ತೊಂದು ಮನೆಯಲ್ಲಿ ಕೇಳಿದರು. ಅಲ್ಲಿಯೂ ಅದೇ ಉತ್ತರ. ಹೀಗೆ ಮೂರು ನಾಲ್ಕು ಮನೆಗಳಲ್ಲಿ ಕೇಳಿ ಇವರಿಗೂ ಸಾಕಾಯಿತು. ಚಂದ್ರಸೇನರಿಗೆ ನಾನು ಮಹಾರಾಜ ಎಂದು ಹೇಳಿಬಿಡಬೇಕು ಎಂದು ಅನಿಸಿತು. ಆದರೆ ಬ್ರಹ್ಮದತ್ತ ತಡೆದ, ಮಹಾರಾಜ ಈ ಊರಲ್ಲಿ ಏನೋ ಸಮಸ್ಯೆಯಿದೆ ಅದನ್ನು ಮೊದಲು ತಿಳಿದುಕೊಳ್ಳೋಣವೆಂದ. ಊರ ಕೊನೆಗೆ ಒಂದು ಗುಡಿಸಲು ಇತ್ತು ಅಲ್ಲಿಗೆ ಹೋದರು. ಬ್ರಹ್ಮದತ್ತ ಬೇಕಂತಲೇ ಜೋರಾಗಿ ಕೆಮ್ಮಲು ಶುರುಮಾಡಿದ. ಒಳಗಡೆಯಿಂದ ಒಬ್ಬಳು ಅಜ್ಜಿ ಬಂದಳು. ಇವರನ್ನು ನೋಡಿ ಒಳಹೋಗಿ ಕುಡಿಯಲು ನೀರು ತಂದು ಕೊಟ್ಟಳು. ನೀರು ಕುಡಿದು ಇವರೇನೋ ಪ್ರಶ್ನೆ ಕೇಳಲು ಹೊರಟಾಗ ತಾನೇ ತಡೆದು, ಮೊದಲು ಊಟ ಮಾಡಿ ಎಂದು ಊಟ ನೀಡಿದಳು. ಊಟವಾದ ಮೇಲೆ ಹೊರಗೆ ಅಂಗಳದಲ್ಲಿ ಕುಳಿತರು. ಅಜ್ಜಿಯೇ ಮಾತನ್ನು ಶುರುಮಾಡಿದಳು. ನಿಮ್ಮ ಅನುಮಾನ ನನಗೆ ತಿಳಿಯಿತು. ಈ ಊರಲ್ಲಿ ಜನ ಯಾಕೆ ಕುಡಿಯಲು ನೀರೂ ಸಹ ಕೊಡುತ್ತಿಲ್ಲವೆಂಬುದೇ? ಅದಕ್ಕೆ ಉತ್ತರ ಹೇಳ್ತೀನಿ ಕೇಳಿ. ನಮ್ಮದು ಐವತ್ತು ಅರವತ್ತು ಮನೆಗಳಿರುವ ಸಣ್ಣ ಹಳ್ಳಿ. ನಮ್ಮ ಮಹಾರಾಜರ ದಯೆಯಿಂದ ಎಲ್ಲರಿಗೂ ಹೊಲ ಸಿಕ್ಕಿದೆ. ವರ್ಷ ವರ್ಷಕ್ಕೆ ಚೆನ್ನಾಗಿ ಮಳೆಯಾಗಿ ಬೆಳೆಗಳಾಗಿ ಹಳ್ಳಿ ಸಮೃದ್ಧಿಯಾಗಿತ್ತು. ಮಹಾರಾಜರು ಕಂದಾಯವನ್ನೂ ಹೆಚ್ಚಾಗಿ ವಿಧಿಸದ ಕಾರಣ ಹಣಕ್ಕೂ ತೊಂದರೆಯಿರಲಿಲ್ಲ. ನಮ್ಮ ಕೈಲಾದಷ್ಟು ಹಸಿದು ಬಂದವರಿಗೆ ಊಟ, ಬೇಡಿದವರಿಗೆ ದಾನವನ್ನೂ ಮಾಡುತ್ತಿದ್ದೆವು. ಆದರೆ ಈ ಒಳ್ಳೆಯತನವೇ ನಮಗೆ ಕೆಡುಕು ಮಾಡುತ್ತದೆ ಎಂದು ತಿಳಿದಿರಲಿಲ್ಲ. ಒಂದು ದಿನ ಸಂಜೆ ಕಳ್ಳನೊಬ್ಬ ದಾರಿತಪ್ಪಿ ನಮ್ಮೂರಿಗೆ ಬಂದ. ಊರ ಮಧ್ಯದಲ್ಲಿ ನನ್ನ ಮನೆಯಿತ್ತು. ಅವನು ಕಳ್ಳನೆಂದು ನನಗೆ ಗೊತ್ತಿರಲಿಲ್ಲ. ಹಸಿವಾಗಿದೆ ತಿನ್ನಲು ಏನಾದರೂ ಕೊಡಿ ಎಂದ. ಊಟ ನೀಡಿದೆ. ಹೊಟ್ಟೆ ತುಂಬಾ ಉಂಡ. ಯಾ ಊರು ಏನು ಎತ್ತ ಅಂತೆಲ್ಲಾ ಕೇಳಿದೆ. ಏನೇನೊ ಕತೆ ಹೇಳಿದ. ಬಡವ ಪಾಪ ಅನಿಸಿತು. ಸಣ್ಣ ಪಾತ್ರೆಯಲ್ಲಿ ಮಜ್ಜಿಗೆ ಕೊಟ್ಟೆ ಕುಡಿದ. ಅವನಿಗೆ ಏನಾದರೂ ಸಹಾಯ ಮಾಡಬೇಕು ಅನಿಸಿತು.

ಒಳಗಡೆ ಹೋಗಿ ಅದೇ ಪಾತ್ರೆ ತುಂಬಾ